# ಕನ್ನಡ ಚಿತ್ರರಂಗದಲ್ಲಿ ಮಹಿಳೆ


## ಷಾಕಿರಾ ಖಾನಂ

ಪ್ರಾಧ್ಯಾಪಕರು, ಹಿಂದಿ ವಿಭಾಗ, ಅಲ್ ಅಮೀನ್ ಕಾಲೇಜ್, ಬೆಂಗಳೂರು.


**Received:** 27-07-2024 ; **Acepted:** 05-09-2024 ; **Published:** 02-10-2024

**DOI: https://doi.org/10.5281/zenodo.13870982**

**ABSTRACT:**

ಸಿನಿಮಾ ವಿವಿಧ ಮಜಲುಗಳನ್ನು ದಾಟುತ್ತಾ ಸಮಾಜದ ವಿವಿಧ ಸಮಸ್ಯೆಗಳನ್ನು ಮುನ್ನೆಲೆಗೆ ತಂದು ಸಾಮಾಜಿಕ ಪರಿವರ್ತನೆ ಮಾಡುವ ಉದ್ದೇಶದಿಂದ ಸಮಾಜಕ್ಕೆ ಉತ್ತಮ ಸಂದೇಶ ನೀಡುವ ಮೂಲಕ ಸಮಾಜವನ್ನು ತಿದ್ದುವ ಕೆಲಸ ಮಾಡಿತಾದರೂ ಬರು ಬರುತ್ತಾ ಅದರ ಗುರಿ ಮನೋರಂಜನೆಯತ್ತ ತಿರುಗಿ ಮಹಿಳೆಯನ್ನು ಒಂದು ವಸ್ತುವನ್ನಾಗಿಸಿ ಮಹಿಳೆಯ ಚಾರಿತ್ರ್ಯವನ್ನೇ ಬಂಡವಾಳವನ್ನಾಗಿಸಿ ಮಹಿಳೆಯ ಸ್ಥಾನಮಾನಕ್ಕೆ ಚ್ಯುತಿ ಬರುವಂತೆ ಮಾಡಿತು.

**KEYWORDS:**

ಸಿನಿಮ, ಮಹಿಳೆ, ವ್ಯಕ್ತಿತ್ವ, ಮನರಂಜನೆ, ಸಮಾಜ.

**ಪೀಠಿಕೆ:**

ಸಿನಿಮಾ ವೈಜ್ಞಾನಿಕ ಬೆಳವಣಿಗೆಯ ಪ್ರಮುಖ ಸಾಧನೆಯಾಗಿದೆ. ಇದು ಸಾಹಿತ್ಯದ ಸ್ವರೂಪಕ್ಕೆ ಹೊಸ ಆಯಾಮವನ್ನು ನೀಡಿದೆ. ಇಲ್ಲಿಯವರೆಗೆ ನಾಟಕವು ಅನೇಕ ಪ್ರಕಾರಗಳ ಶಿಸ್ತುಬದ್ಧ ಪ್ರಕಾರವಾಗಿ ಪ್ರಚಲಿತವಾಗಿತ್ತು. ಸಿನಿಮಾದ ಆಗಮನವು ಸಮಾಜ, ನಟನೆ ಮತ್ತು ಚಟುವಟಿಕೆಯ ಸಮನ್ವಯಕ್ಕೆ ವಿಶಾಲ ದೃಷ್ಟಿಕೋನವನ್ನು ನೀಡಿತು. ಸ್ವಾತಂತ್ರ್ಯ ಚಳವಳಿಯ ಸಂದರ್ಭದಲ್ಲಿ ಶಿಕ್ಷಣ ಮತ್ತು ಸಾಮಾಜಿಕ ಸಮಸ್ಯೆಗಳನ್ನು ಆಧರಿಸಿದ ಚಲನಚಿತ್ರಗಳನ್ನು ನಿರ್ಮಿಸಲಾಯಿತು. ಸ್ವಾತಂತ್ರ್ಯಾನಂತರ ಕನ್ನಡ ಚಿತ್ರರಂಗದ ಬಹುತೇಕ ಚಿತ್ರಗಳು ಊಳಿಗಮಾನ್ಯ ಸಂಸ್ಕೃತಿಗೆ ಸವಾಲೊಡ್ಡುತ್ತಿದ್ದವು. ಆದರೆ ನಂತರದ ಯುಗದಲ್ಲಿ ಸಿನಿಮಾ ಈ ವೈಭವೋಪೇತ ಸಂಪ್ರದಾಯದಿಂದ ದೂರ ಸರಿಯತೊಡಗಿದವು. ನಂತರ ಅದು ಮತ್ತೆ ತನ್ನ ಹಿಂದಿನ ಹಾದಿಯನ್ನು ಅನುಸರಿಸಿತು. ಈ ಹಾದಿ ಸುಗಮವಾಗಿತ್ತೋ ಅಥವಾ ಕಠಿಣವಾಗಿತ್ತೋ ಬೇರೆ ವಿಷಯ ಆದರೆ ಅದು ರಾಜಪಥವಂತೂ ಆಗಿರಲಿಲ್ಲ. ಸಿನಿಮಾದ ಈ ಬದಲಾವಣೆಯ ಸ್ವರೂಪದೊಂದಿಗೆ, ಮುಖ್ಯವಾಗಿ ಮಹಿಳೆಯರನ್ನು ಕೇಂದ್ರೀಕರಿಸಿದ ಚಲನಚಿತ್ರಗಳು ಬರಲಾರಂಭಿಸಿದವು. ಸಾಮಾನ್ಯವಾಗಿ ಪ್ರತಿ ಸಿನಿಮಾದಲ್ಲೂ ಒಂದಲ್ಲ

ಒಂದು ರೀತಿಯ ಮಹಿಳಾ ಪ್ರಧಾನತೆಯನ್ನು ತೋರಿಸಲಾಯಿತು. ಈ ಮೂಲಕ ಕನ್ನಡ ಚಿತ್ರರಂಗ ಕ್ರಮೇಣ ಮಹಿಳೆಯರಿಗೆ ಸಂಬಂಧಿಸಿದ ವಿಶೇಷ ಕಾಳಜಿಯನ್ನು ಬೆಳೆಸಿಕೊಂಡಿತು ಕ್ರಮೇಣ ಚಿತ್ರರಂಗದಲ್ಲಿ ಮಹಿಳೆಯರಿಗೆ ವಿಶೇಷ ಸ್ಥಾನ ಸಿಗಲಾರಂಭಿಸಿ ಹೆಣ್ಣಿಲ್ಲದೆ ಯಾವ ಚಿತ್ರವನ್ನೂ ನಿರ್ಮಾಣಮಾಡಲೇ ಇಲ್ಲ ಎಂಬುದೇ ಇಂದಿನ ಅಭಿವೃದ್ಧಿಯ ರೂಪವಾಗಿದೆ. ಮೊದಲು ಮಹಿಳೆ ಸಿನಿಮಾ ನಿರ್ಮಾಪಕರಿಗೆ ವೃತ್ತಿಪರತೆಯನ್ನು ಹೆಚ್ಚಿಸುವ ಮಾಧ್ಯಮವಾಗಿದ್ದಳಷ್ಟೇ. "ವ್ಯಾಪಾರಿಕರಣ ಹೆಚ್ಚಾದಂತೆ ಕನ್ನಡ ಚಿತ್ರಗಳಲ್ಲಿ ನಾಯಕಿ ಕೇವಲ ಪ್ರದರ್ಶನ ಮತ್ತು ಗ್ಲಾಮರ್‌ನ ವಸ್ತುವಾಗಿದ್ದಳು." 'ಮೈಡೊಂಕಿನ ವೈಯಾರಿ....' ದಿಂದ 'ನಿಂಬೆ ಹಣ್ಣಿನಂತ ಹುಡುಗಿ.. ಯಾರಿವಳು' ಹಾಡುಗಳನ್ನು ಅವರ ಸೌಂದರ್ಯವನ್ನು ಹೊಗಳಿ ಹಾಡಲಾಯಿತು. 'ನಾರಿ ಮುನಿದರೆ ಮಾರಿ, ನಾರಿ ನರಕಕ್ಕೆ ದಾರಿ' ಎಂಬ ಆಕ್ಷೇಪಾರ್ಹ ವಾಕ್ಯಗಳನ್ನು ಪುನರಾವರ್ತಿಸಲಾಯಿತು.

ಇದು ಚಿತ್ರರಂಗದಲ್ಲಿ ಮಹಿಳೆಯ ಆರಂಭಿಕ ರೂಪವಾಗಿತ್ತು ಆದರೆ ಕಾಲಾನಂತರದಲ್ಲಿ ಮಹಿಳೆಯ ಬಗ್ಗೆ ಮತ್ತೊಂದು ದೃಷ್ಟಿ ಬೆಳೆಯಲು ಪ್ರಾರಂಭಿಸಿತು. ಇದರಲ್ಲಿ ಮಹಿಳೆ ಬಲಿಪಶುವಾಗಿರದೆ ತನ್ನ ಹಕ್ಕುಗಳ ಬಗ್ಗೆ ಜಾಗೃತಳಾಗಿ ತನ್ನ ಅಸ್ತಿತ್ವಕ್ಕಾಗಿ ಹೋರಾಡಿ ಅನ್ಯಾಯದ ವಿರುದ್ಧ ಧ್ವನಿ ಎತ್ತುತ್ತಾಳೆ. ಆಗ ಮಹಿಳೆಯನ್ನು ಮನುಷ್ಯಳಂತೆ ತೋರಿಸಲು ಪ್ರಾರಂಭಿವಾಯಿತು. 1934 ರ 'ಸತಿ ಸುಲೋಚನ' 'ಭಕ್ತ ಧ್ರುವ' ಇತ್ಯಾದಿ ಚಲನಚಿತ್ರಗಳು ಮಹಿಳಾ ಭಾವನೆಯನ್ನು ಸಿನಿಮಾದ ಸಂವೇದನೆಯೊಂದಿಗೆ ಜೋಡಿಸಿದವು. ಮುಂದೆ ಚಿತ್ರಣಗೊಂಡ ಚಿತ್ರಗಳಲ್ಲಿ ನಾಯಕಿಯರು ಹೊಂದಾಣಿಕೆಯಾಗದ ಮದುವೆಗಳ ವಿರುದ್ಧ ಬಂಡಾಯವೆದ್ದರು. 1969 ರ ಕಪ್ಪು ಬಿಳುಪು ಸಿನಿಮಾ ಮೊದಲ ನಾಯಕಿ ಪ್ರಧಾನ ಕನ್ನಡ ಚಿತ್ರ 'ಗೆಜ್ಜೆ ಪೂಜೆ' ಮತ್ತು 'ಶರಪಂಜರ' 'ರಂಗನಾಯಕಿ'ಯಂತಹ ಚಲನಚಿತ್ರಗಳು ವೇಶ್ಯೆಯರ ಮತ್ತು ನಟಿಯರ ಜೀವನವನ್ನು ನಮ್ಮ ಮುಂದೆ ತಂದವು. ಹಲವಾರು ಚಿತ್ರಗಳಲ್ಲಿ ಚಿತ್ರಿತವಾಗಿರುವ ಸಮಾಜ ಮಹಿಳೆಯರದ್ದೆ, ಹೇಗೆ ಮತ್ತು ಯಾವಾಗಲೂ ಮಹಿಳೆ ಕೇವಲ ಮನರಂಜನೆಯ ಮಾಧ್ಯಮವಾಗಿದ್ದಾಳೆ ಎಂಬುದನ್ನು ಈ ಚಲನಚಿತ್ರಗಳಲ್ಲಿ ಚೆನ್ನಾಗಿ ತೋರಿಸಲಾಗಿದೆ. 'ದೇವಿರಿ' ಚಿತ್ರದ ಸಂಪೂರ್ಣ ಹಿನ್ನೆಲೆಯು ಮಹಿಳೆಯ ದಿನಚರಿಯನ್ನೂ ಪ್ರಸ್ತುತಪಡಿಸುತ್ತದೆ. ಮಹಿಳೆಯ ಜೀವನವನ್ನು ಚಿತ್ರಿಸುವ ಮೂಲಕ ಸಿನಿಮಾದಲ್ಲಿ ನಿರ್ದೇಶಕರು ಹೊಸ ಅರ್ಥ ನೀಡಿದ್ದಾರೆ. ಮಹಿಳೆಯರ ನಿಜವಾದ ಜೀವನ ಹೇಗಿರುತ್ತದೆ ಎಂದು ಹೇಳುವ ಪ್ರಯತ್ನ ಮಾಡಿದ್ದಾರೆ. 'ಗೆಜ್ಜೆ ಪೂಜೆ' ಸಿನಿಮಾ ಗ್ರಾಮೀಣ ಪರಿಸರದಲ್ಲಿ ಪ್ರಾರಂಭವಾಗುತ್ತದೆ. ಒಬ್ಬ ಮಹಿಳೆಗೆ ಹೇಗೆ ವೇಶ್ಯ ಮಾಡಿ ಹುಡುಗಿಯನ್ನು ವೇಶ್ಯಾಗೃಹದಲ್ಲಿ ಹೇಗೆ ಮಾರಾಟ ಮಾಡಲಾಗುತ್ತದೆ ಎಂದು ಬಹಳ ಮಾರ್ಮಿಕವಾಗಿ ಚಿತ್ರಿಸಲಾಗಿದೆ. ಇದು ಮಹಿಳೆಯರ ಸಾಮಾಜಿಕ

ಸ್ಥಾನಮಾನವನ್ನು ಮುಂದಿಟ್ಟುಕೊಂಡು, ಇಂದಿಗೂ ಮಹಿಳೆ ಸಮಾಜದಲ್ಲಿ ಒಂದೇ ರೀತಿಯ ಬಲಾತ್ಕಾರಗಳ ನೊಗವನ್ನು ವಿಭಿನ್ನ ರೀತಿಯಲ್ಲಿ ಹೆಗಲ ಮೇಲೆ ಹೊತ್ತಿಲ್ಲ ಎಂಬ ಪ್ರಶ್ನೆಯನ್ನು ಎತ್ತಿ ಹಿಡಿಯುವ ಮೂಲಕ ಭಾರತೀಯ ಚಿತ್ರರಂಗ ದೊಡ್ಡ ಸಾಧನೆಗೈದಿದೆ.

ನಂತರ ಅದೇ ರೀತಿಯ ಹಲವು ಹೊಸ ಚಿತ್ರಗಳೂ ಬಂದವು. ಇದು ಮಹಿಳೆಯರ ಸಮಸ್ಯೆಗಳ ಕಾರಣಗಳನ್ನು ನಮ್ಮ ಮುಂದೆ ತಂದವು. ಮಹಿಳೆ ವೇಶ್ಯೆಯಾದರೆ ಇದನ್ನು ಮಾಡಲು ಮಹಿಳೆಗೆ ಬಲವಂತ ಪಡಿಸುವ ಕಾರಣಗಳೇನು ಎಂಬುದನ್ನು ಸಿನಿಮಾ ಸಮಾಜದ ಮುಂದೆ ಇಟ್ಟಿತು. ಈ ಹೊಸ ದೃಷ್ಟಿಕೋನದಿಂದ ಮಹಿಳೆಯರನ್ನು ಚಿತ್ರರಂಗಕ್ಕೆ ಕರೆತರುವುದು ಮತ್ತು ಮಹಿಳೆಯರನ್ನು ಹೊಸ ದೃಷ್ಟಿಕೋನದಿಂದ ನೋಡುವ ಅವಶ್ಯಕತೆಯಿದೆ ಎಂಬುದನ್ನು ಸಮಾಜಕ್ಕೆ ತೋರಿಸುವುದು ಸವಾಲಾಗಿ ಸ್ವೀಕರಿಸಿತು ಚಿತ್ರರಂಗ 'ಶರಪಂಜರ' 'ಕಾನೂರು ಹೆಗ್ಗಡತಿ'ಯಂತಹ ಹೃದಯ ಸ್ಪರ್ಶಿ ಚಿತ್ರದ ನಾಯಕಿ ಸಮಾಜದ ಅತ್ಯಾಚಾರದ ವಿರುದ್ಧ ಧ್ವನಿ ಎತ್ತುತ್ತಾಳೆ. ಆದರೆ ಈ ಕಾರಣದಿಂದಾಗಿ ಅವಳು ಅತ್ಯಂತ ಅಮಾನವೀಯ ಪರಿಸ್ಥಿತಿಗಳನ್ನು ಎದುರಿಸುತ್ತಾಳೆ. ಏಕೆಂದರೆ ಅವಳು ಸತ್ಯವಾಗಿರಲು ಬಯಸುತ್ತಾಳೆ. ಮದುವೆಯಾದ ಹೆಣ್ಣು ಆಸರೆ ಪಡೆಯಲು ತನ್ನ ಹೆತ್ತವರ ಮನೆಗೆ ಹೋದಾಗ 'ಹುಡುಗಿಯ ನಿಜವಾದ ಮನೆ ಅವಳ ಗಂಡನ ಮನೆ' ಎಂದು ಹೇಳಿ ಹೊರಗಿಡಲಾಗುತ್ತದೆ. ಒಂದು ವೇಳೆ ಕಾರಣಾಂತರದಿಂದ ಹುಡುಗಿ ಗಂಡನ ಮನೆಯನ್ನು ಬಿಟ್ಟು ಹೋದರೆ ಅವಳು ಆತ್ಮಹತ್ಯೆ ಮಾಡಿಕೊಳ್ಳಬೇಕೇ? ಅವಳು ಯಾರು ಮತ್ತು ಅವಳು ಯಾರು ಬಳಿ ಹೋಗಬೇಕು? ಇದಕ್ಕೆ ಯಾವುದೇ ಪರಿಹಾರ ಇಲ್ಲವೇ? ಮಹಿಳಾ ಚರ್ಚೆಯ ದೃಷ್ಟಿಯಿಂದ ಈ ಚಿತ್ರಗಳು ಬಹಳ ಮುಖ್ಯ. ತದನಂತರ ಬಂದು ನಾಯಕಿಯರು ಇಂದಿನ ಸಮಾಜಕ್ಕೆ ಪ್ರಶ್ನೆ ಹಾಕುತ್ತಾರೆ. ಅದು ನೋಡುಗರನ್ನು ಯೋಚಿಸುವಂತೆ ಮಾಡುತ್ತದೆ, ತಂದೆಯ ದೌರ್ಜನ್ಯದ ವಿರುದ್ಧ ದನಿ ಎತ್ತುವ ಮಹಿಳೆ ಒಂದು ದಿನ ತನ್ನ ತಂದೆಯನ್ನೇ ಕೊಲೆ ಮಾಡಲೂ ಹೇಸುವುದಿಲ್ಲ ಕಾರಣ ಏಳು ಜನ ಹೆಣ್ಣು ಮಕ್ಕಳಿದ್ದರೂ ಅಪ್ಪನಿಗೆ ಮಗನ ಆಸೆ ಕಡಿಮೆಯಾಗದ ಕಾರಣ. ತಂದೆ ಒಂದು ಮಗುವನ್ನು ಬೆಳೆಸುವ ಸ್ಥಿತಿಯಲ್ಲಿಲ್ಲದಿದ್ದರೂ ಹೆಂಡತಿಗೆ ಮಕ್ಕಳನ್ನು ಹೊಂದಲು ಒತ್ತಾಯಿಸುತ್ತಾನೆ ಮತ್ತು ಅದು ದೇವರ ಕೊಡುಗೆ ಎಂದು ಹೇಳುತ್ತಾನೆ. ಈ ಪಿತೃಪ್ರಧಾನ ಸಮಾಜಕ್ಕೆ ಒಂದು ಪ್ರಮುಖ ಪ್ರಶ್ನೆಯನ್ನು ಹಾಕುತ್ತಾಳೆ.

ಇಂದು ಸಿನಿಮಾ ಮಹಿಳೆಯನ್ನು ಸಂಪೂರ್ಣವಾಗಿ ಮುಂದಕ್ಕೆ ಕೊಂಡೊಯ್ಯಲು ಮತ್ತು ಅದಕ್ಕೆ ಸರಿಯಾದ ರೂಪ ಕೊಡಲು ಸಹಕಾರಿಯಾಗಿದೆ ಎಂದು ಹೇಳುವುದು ಸರಿಯಲ್ಲ. ಚಿತ್ರರಂಗದಲ್ಲಿ ಮಹಿಳೆಯರು ಕೇವಲ ಒಂದು

ಸಾಧನವಾಗಿ ಪ್ರಾರಂಭವಾದರು ನಿಜ ಆದರೆ ಅಂತಹ ಕೆಲವು ಚಲನಚಿತ್ರಗಳು ನಿರ್ಮಾಣವಾಗುತ್ತಲೇ ಇವೆ. ಅದರ ಮೂಲಕ ಮಹಿಳೆಯ ಹೊಸ ರೂಪ ಇಂದು ನಮ್ಮ ಮುಂದೆ ಬಂದಿದೆ ಮತ್ತು ಸಾಮಾನ್ಯವಾಗಿ ಉತ್ತಮವಾಗುತ್ತಿದೆ ಎಂದು ಹೇಳಬಹುದು.

**ಪರಾಮರ್ಶನ ಗ್ರಂಥಗಳು:**

1. ಪ್ರಹಲ್ಲಾದ ರಾವ್ ಅ. ನ. (2021). ಹೆಜ್ಜೆಗುರುತು: ಕನ್ನಡ ಚಲನಚಿತ್ರ ಚರಿತ್ರೆ. ತಾರಾ ಪ್ರಿಂಟ್ಸ್. ಮೈಸೂರು.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.